ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 18 ರವರೆಗೆ,ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು :- ಪ್ರಸ್ತಾವ ಎನೆಂದರೆ :

"ಖಂಡ 1, ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿ ನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 1, ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿ ನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾಪದ ಅಂಗೀಕಾರ

ಶ್ರೀ ರಮೇಶ ಸಿ. ಜಿಗಜಿಣಗಿ :- (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಖಾತೆ ಸಚಿವರು) ಮಾನ್ಯ ಉಪಾಧ್ಯಕ್ಷರೆ, 1995 ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಎನೆಂದರೆ : "1995 ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲ್ಪಟಿತು

(2) ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 1995 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಬೃಹತ್ ನೀರಾವರಿ ರಾಜ್ಯ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, 1995 ರ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇವೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) :- ವಿಷಯ ಹೇಳಲಿಲ್ಲ ತಾವು. ನಿಮ್ಮ ಬಿಲ್‌ನ ಉದ್ದೇಶ ಏನು ಎನ್ನುವುದನ್ನು ದಯವಿಟ್ಟು ಹೇಳಿ.

SRI B. B SHIVAPPA :- Hon'ble Deputy Speaker Sir, before he commences, please see the reasons given.....

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ :- ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿ ನಿಯಮ 1981ಕ್ಕೆ ಈ ಕೆಳಗೆ ಕಾಣಿಸದವರನ್ನು ಪ್ರಾಧಿಕಾರದ ಸದಸ್ಯರುಗಳನ್ನಾಗಿ ಸೇರಿಸಿ ಕೊಳ್ಳಲು ತಿದ್ದುಪಡಿ ಮಾಡುವುದು ಅವಶ್ಯಕ ಎಂದು ಪರಿಗಣಿಸಲಾಗಿದೆ. ಮುಖ್ಯ ಇಂಜಿನೀ ಯರ್ ಅವರೊಂದಿಗೆ ಆಯಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಹಾ ಮುಖ್ಯ ಇಂಜಿನೀ ಯರುಗಳು, ಜಂಟಿ ಕೃಷಿ ನಿರ್ದೇಶಕರು ಮತ್ತು ಸಹಕಾರ ಸಂಘಗಳ ಜಂಟಿ ರಿಜಾಸ್ಟ್ರಾರನ್ನು

ಪ್ರಾಧಿಕಾರದ ಸಭೆಗಳಿಗೆ ಹಾಜರಾಗಲು ಕೃಷಿ ನಿರ್ದೇಶಕರು ಅಥವಾ ಸಂದರ್ಭಾನುಸಾರ ಸರಕಾರ ಸಂಘಗಳ ರಿಜಿಸ್ಟ್ರಾರ್ ನಾಮನಿರ್ದೇಶಿತರಾಗಿ ಪ್ರತಿನಿಧಿಸುವಂತೆ ಮಾಡುವುದು.

ಶ್ರೀ ಹೆಚ್. ಶಿವಪ್ಪ :- ಮಾನ್ಯ ಉಪಾಧ್ಯಕ್ಷರೇ, ಈ ಡ್ರಾಫ್ಟಿಂಗ್‌ಅನ್ನು ದಯವಿಟ್ಟು ನೋಡಿ. ಈಗ Statement of objects and reasons ತಂದಿದ್ದಾರೆ. ರೀಸನ್ಸ್ ಏನು ಹೇಳಿದ್ದಾರೆ. It is considered necessary.....What is considered necessary? It has not been spelt out so clearly. They say `It is considered necesssary,' It is as vague as it could be as it is possible.

ಎಲ್ಲಾ ಸ್ಟೇಟ್‌ಮೆಂಟ್ ಆಫ್ Objects ನೋಡಿ. ಅದು ಕ್ಲಿಯರ್ ಆಗಿ ಇರುವುದಿಲ್ಲ. ಈ ಸ್ಟೇಟ್‌ಮೆಂಟ್ ಆಫ್ Objects ಅಂಡ್ ರೀಸನ್ಸ್ ಯಾವ ಕಾರಣಕ್ಕೋಸ್ಕರ, ಯಾವ ಉದ್ದೇಶವನ್ನು ಸಾಧಿಸಲಿಕ್ಕೋಸ್ಕರವಾಗಿ ಈ ಒಂದು ವಿಧೇಯಕವನ್ನು ತಂದಿದ್ದೇವೆ ಎನ್ನುವುದಕ್ಕೆ ಇದು Common Statement of Objects. I draw the attention of the Government through you Sir, it is not very clear as to why this Bill has beeen brought for, reasons are not known. In the Statement of objects and reasons they have given it as `It is considered neecessary'.

(INTERRUTION)

SRI K. SHARANAPPA :- It is considered necessary to include the Director of Agriculture, Registrar of Co-operative Societies... Co-operative Department Officers and Agriculture Department Officers should be the Members of that Authority.

SRI H. SHIVAPPA :- I feel sorry. My friend is stepping into the shoes of the Hon'ble Minister. It is the Government. The reasons furnished is not defending. It is a lapse on the part of the Drafting Department.

ಉಪಾಧ್ಯಕ್ಷರು :- ಶಿವಪ್ಪನವರೇ, ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ಅಷ್ಟೇ.

SRI K. SHARANAPPA :- It is considered necessary .....What is considered necessary?

(INTERRUPTION)

SRI K. SHARANAPPA :- To include the following Members...

SRI H. SHIVAPPA :- Our statement has been justified.

(INTERRUPTION)

SRI H. SHIVAPPA :- Don't try to defend. It is considered necessary. What is considered necessary? Why it is necessary? Should there not be reasons? ಹೇಳಿ ನೋಡೋಣ. ಎಲ್ಲದರಲ್ಲೂ ಹಾಗೇ ಬಂದಿದೆ. ಇದು. ಬ್ಯಾಕ್‌ವರ್ಡ್ ಕಮೀಷನ್‌ನಲ್ಲೂ ಅಷ್ಟೇ. It is common. It is a common phenomenon.

ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಒಂದು ವಿಧೇಯಕವನ್ನು ತಂದಾಗ ಅದರ ಪೂರ್ಣ ಅಮೆಂಡ್‌ಮೆಂಟ್ ಎಲ್ಲವನ್ನೂ ಕೂಡ ಉದ್ದೇಶದಲ್ಲಿ ತರುವುದಿಲ್ಲ, ಅಮೆಂಡ್‌ಮೆಂಟ್‌ನಲ್ಲಿ ಇರುವುದಿಲ್ಲ. ಅದರ ಆಬ್ಜೆಕ್ಟನ್ನು ಇಲ್ಲಿ ಹೇಳಿರುತ್ತಾರೆ. ಈಗ ಇರತಕ್ಕಂಥ ಕರ್ನಾಟಕ ಅಬ್ಬುಕಟ್ಟು ಪ್ರದೇಶಾಭಿವೃದ್ಧಿ ವಿಧೇಯಕ, 1995, ಏನಿದೆ, ಈ ವಿಧೇಯಕದ ಮೂಲಕ ಈಗ ಇರತಕ್ಕಂಥಾದ್ದಕ್ಕೆ ಒಬ್ಬ ಇಂಜಿನಿಯರ್-ಇನ್-ಚೀಫ್ ಅವರನ್ನು ಸದಸ್ಯರನ್ನಾಗಿ ಮಾಡತಕ್ಕಂಥಾದ್ದು, ಕೃಷಿ ಇಲಾಖೆಯ ಜಂಟೀ ನಿರ್ದೇಶಕರನ್ನು ಸದಸ್ಯರನ್ನಾಗಿ ಮಾಡತಕ್ಕಂಥಾದ್ದು ಮತ್ತು ಕೋ-ಆಪರೇಟಿವ್ ಆಕ್ಟ್ ರಿಜಿಸ್ಟ್ರಾರ್ ಇಲಾಖೆಯಿಂದ ಒಬ್ಬರನ್ನು ಸದಸ್ಯರನ್ನಾಗಿ ಮಾಡತಕ್ಕದ್ದು. ಈ ಸದಸ್ಯರುಗಳ ಅಗತ್ಯ ಇರುವುದರಿಂದ ಅಲ್ಲಿ ಈ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಮಾಡಲಿಕ್ಕೋಸ್ಕರವಾಗಿ ಈ ತಿದ್ದುಪಡಿಯನ್ನು ತಂದಿರತಕ್ಕದ್ದು. ಇದು ಬಹಳ ಸರಳವಾದಂಥ ಒಂದು ವಿಧೇಯಕ. ಇದರ ಬಗ್ಗೆ ಒಂದು ದೊಡ್ಡ ವ್ಯಾಖ್ಯಾನದ ಅಗತ್ಯ ಇಲ್ಲ. ಆದ್ದರಿಂದ ದಯಮಾಡಿ ಇದಕ್ಕೆ ದೊಡ್ಡ ಚರ್ಚೆ ಬೇಕಾಗಿಲ್ಲ. ಎಂಬುದು ನನ್ನ ಅನಿಸಿಕೆ. ಮಾನ್ಯ ಸದಸ್ಯರುಗಳು ಇದಕ್ಕೆ ಯಾವುದೇ ಚರ್ಚೆ ಇಲ್ಲದೇ ಒಪ್ಪಿಗೆ ಕೊಡಬಹುದು ಎಂದು ನನಗೆ ಅನ್ನಿಸುತ್ತದೆ. ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬಹುದು.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ;

"1995 ರ ಕರ್ನಾಟಕ ಅಬ್ಬುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು :- "ಖಂಡ ಎರಡು ಈ ವಿಧೇಯಕದ ಅಂಗವಾಗಿರುತ್ತದೆ". ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಆಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಬೃಹತ್ ನೀರಾವರಿ ರಾಜ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, 1995 ರ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ;

"1995 ರ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲ್ಪಟ್ಟಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಮಂತ್ರಿಗಳ ಪರವಾಗಿ, 1995 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇಂಜಿನಿಯರ್ ಸದಸ್ಯರುಗಳನ್ನು ನೇಮಿಸುವಾಗ ಅಲ್ಲಿ "ಕರ್ನಾಟಕ ಇಂಜಿನಿಯರಿಂಗ್ ಸೇವೆಯಲ್ಲಿ" ಎಂಬ ಪದಗಳ ನಂತರ "ರಾಜ್ಯ ಸರ್ಕಾರಕ್ಕೆ, ಸರ್ಕಾರದ ಒಡೆತನಕ್ಕೆ ಅಥವಾ ನಿಯಂತ್ರಣಕ್ಕೆ ಸೇರಿದ ಯಾವುದೇ ಉದ್ಯಮದಲ್ಲಿ ನೇಮಕಗೊಂಡಿರುವ" ಎನ್ನುವ ಪದಗಳನ್ನು ಸೇರಿಸಲಿಕ್ಕೆ ನಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಆದ್ದರಿಂದ ರಾಜ್ಯ ಸರ್ಕಾರದ ಒಡೆತನಕ್ಕೆ ಅಥವಾ ನಿಯಂತ್ರಣಕ್ಕೆ ಸೇರಿದ ಮುಖ್ಯ ಇಂಜಿನಿಯರ್ ಕೇಡರ್ ಅವರನ್ನು ಈ ಇಂಜಿನಿಯರಿಂಗ್ ಸದಸ್ಯರಾಗಿ ನೇಮಕ ಮಾಡಲಿಕ್ಕೋಸ್ಕರವಾಗಿ ಈ ಒಂದು ತಿದ್ದುಪಡಿಯನ್ನು ತರಲಾಗಿದೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ; "1995 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".